NP – 008

I Semester B.C.A. Examination, February/March 2024
(NEP) (F+R)
ಕನ್ನಡ ಭಾಷಾ ಪತ್ಯ (ಪತ್ರಿಕೆ – 1)
ಗಣಕ ಕನ್ನಡ – 1

VISHWA CHETHANA DEGREE COLLEGE Anekal

Time : 2½ Hours Max. Marks : 60

I. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (80 ಪದಗಳಿಗೆ ಮೀರದಂತೆ) (4×5=20)

1) ಕನ್ನಡ ಭಾಷೆಯು ಸರಳ ಹಾಗೂ ಸುಲಲಿತವೆಂದು ಕವಿ ಹೇಗೆ ಹೇಳಿದ್ದಾನೆ ?

2) ಐಟಿ ಉದ್ದಿಮೆ ಜನರನ್ನು ಹೇಗೆ ಸೆಳೆಯುತ್ತಿದೆ ? ಚರ್ಚಿಸಿ.

3) ಕರ್ನಾಟಕ ಒಂದೇ ಎಂದು ಹೇಳಲು ಕಾರಣವೇನು ? ಚರ್ಚಿಸಿ.

4) ಸುಲೇಮಾನನೊಂದಿಗಿನ ಮದುವೆ ಮುರಿದು ಬೀಳಲು ಕಾರಣವೇನು ? ವಿವರಿಸಿ.

5) ಪು.ತಿ.ನ. ಅವರ ನಾಟಕದಲ್ಲಿ ರಾಧೆಯ ರೂಪ ಹೇಗೆ ನಿರೂಪಿತವಾಗಿದೆ ?

6) ಶಾಂತಿ ಶಂಕರನ ಪತ್ರಕ್ಕಾಗಿ ಕಾಯಲು ಕಾರಣವೇನು ? ವಿವರಿಸಿ.

II. ಎರಡು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ (160 ಪದಗಳಿಗೆ ಮೀರದಂತೆ) (2×10=20)

1) ಮಗಳಂತಿದ್ದ ಮುಬೀನಾ ಮುಕುಂದಣ್ಣನ ಹೆಂಡತಿಯಾದದ್ದು ಹೇಗೆ ? ವಿವರಿಸಿ.

2) ಒಂದು ಚಿತ್ರ ಕಥೆಯ ಆಶಯವನ್ನು ನಿಮ್ಮದೇ ದೃಷ್ಟಿಕೋನದಲ್ಲಿ ಚರ್ಚಿಸಿ.

3) ಫೇಸ್‌ಬುಕ್, ಟ್ವಿಟರ್, ವಾಟ್ಸಾಪ್,ಇನ್‌ಸ್ಟಾಗ್ರಾಂ ಹಾಗೂ ಬ್ಲಾಗ್‌ಗಳ ಕುರಿತು ನಿಮ್ಮ ಅಭಿಪ್ರಾಯವನ್ನು ಮಂಡಿಸಿ.

III. ಕೆಳಕಂಡ ಪತ್ಯವನ್ನು ಮೂರನೆಯ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆದು ಸೂಕ್ತ ಶೀರ್ಷಿಕೆ ನೀಡಿರಿ. (1×3=3)

ಭಾರತ ದೇಶ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಭಾಷಿಕವಾಗಿ ಬೇರೆ ದೇಶಗಳಂತಲ್ಲ. ವಿವಿಧ ಜನಾಂಗಗಳು, ವಿವಿಧ ಸಮುದಾಯಗಳು, ವಿವಿಧ ಭಾಷೆಗಳು ಇರುವುದರಿಂದ ಇದು ಬಹುಮುಖಿ ಮತ್ತು ಬಹುಸಂಸ್ಕೃತಿಗಳಿಂದ ರೂಪಗೊಂಡ ಸಮಾಜವಾಗಿದೆ. ಇಲ್ಲಿನ ಸಮಾಜವನ್ನು, ಧರ್ಮ, ಜಾತಿ, ಪ್ರದೇಶ, ಸಂಸ್ಕೃತಿ ಮತ್ತು ಭಾಷೆಗಳಿಂದ ವಿಭಾಗಿಸಿ ನೋಡಲು ಸಾಧ್ಯವಿದೆ. ಜಗತ್ತಿನಲ್ಲಿರುವ ಒಟ್ಟು ಭಾಷೆಗಳಲ್ಲಿ ಶೇಕಡಾ 10 ರಷ್ಟು ಭಾಷೆಗಳು ಭಾರತ ದೇಶವೊಂದರಲ್ಲಿಯೇ ಇವೆ ಎಂದು ವಿದ್ವಾಂಸರು ಹೇಳುತ್ತಾರೆ. ಹಾಗಾಗಿ ಸುಮಾರು 7500 ರಿಂದ 9000 ಭಾಷೆಗಳಲ್ಲಿ ಸುಮಾರು 750 ರಿಂದ 850 ಭಾಷೆಗಳು

ಭಾರತದಲ್ಲಿವೆ. ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿನ ಭಾಷೆಗಳ ಬಗ್ಗೆ ನಡೆಸಿದ ಭಾಷಿಕ ಸರ್ವೇಕ್ಷಣದಲ್ಲಿ ಇದನ್ನು ಧೃಢಪಡಿಸಲಾಗಿದೆ. ಕರ್ನಾಟಕದಲ್ಲೂ ಕೂಡ ಇಂತಹದ್ದೇ ವಿಶಿಷ್ಟವಾದ ಸಂದರ್ಭವನ್ನು ಕಾಣುತ್ತೇವೆ. ಇಲ್ಲೂ ಕೂಡ ಹತ್ತಾರು ಧರ್ಮಗಳು, ನೂರಾರು ಜಾತಿಗಳು ಹಾಗೂ ಉಪಜಾತಿಗಳು ಮತ್ತು ಬುಡಕಟ್ಟುಗಳು ತಮ್ಮದೇ ಭಿನ್ನವಾದ ಸಂಸ್ಕೃತಿಯನ್ನು ಹೊಂದಿವೆ. ಹೀಗೆ ಭಿನ್ನ ಭಿನ್ನ ಧರ್ಮ, ಜಾತಿ, ಸಂಸ್ಕೃತಿಗಳಿಂದ ಕೂಡಿದ ಜನರು ತಮ್ಮದೇ ವಿಶಿಷ್ಟವಾದ ಭಾಷೆಯನ್ನು ಬಳಸುತ್ತಿದ್ದಾರೆ. ಇಂತಹ ಬಹುತ್ವಗಳಿಂದ ಕೂಡಿದ ಕರ್ನಾಟಕದಲ್ಲಿ ಬಹುಸಂಖ್ಯಾತರು ಬಳಸುವ ಭಾಷೆ ಕನ್ನಡವಾಗಿದ್ದರೂ, ಅದು ಕನ್ನಡವಲ್ಲ. ಹಲವು ಕನ್ನಡಗಳಿವೆ. ಅವುಗಳಲ್ಲಿ ಪ್ರಾದೇಶಿಕವಾಗಿ ಮತ್ತು ಸಾಮಾಜಿಕವಾಗಿಯೂ ಭಿನ್ನ ರೂಪಗಳನ್ನು ನೋಡಲು ಸಾಧ್ಯವಿದೆ.

IV. ಸಂಕ್ಷೇಪಿಸಿದ ಬರಹ ಆಧರಿಸಿ **ಎರಡು** ಪ್ರಶ್ನೆ ರೂಪಿಸಿ. **(2×1=2)**

V. ಇವುಗಳಲ್ಲಿ **ಎರಡು** ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ. **(2×1=2)**

1) ಅನುಭವಾಮೃತ

2) ಗಾಳಿಮಾತು

3) ಗಡಿಬಿಡಿ

4) ಕುಗ್ರಾಮ.

VI. ವರ್ಗಾವಣೆ ಪತ್ರ ಕೋರಿ ಪ್ರಾಂಶುಪಾಲರಿಗೊಂದು ಪತ್ರ ಬರೆಯಿರಿ. **(1×4=4)**

VII. ಇವುಗಳಲ್ಲಿ **ನಾಲ್ಕು** ಪದಗಳಿಗೆ ಅರ್ಥ ಬರೆಯಿರಿ. **(4×1=4)**

1) ಪಾತಕ

2) ನಿರ್ವಾತ

3) ಮೋಳೆ

4) ಲಗ್ನ

5) ಕರವಿಕಲ

6) ಹಿಂಗ್ಯಾಕ.

VIII. ಇವುಗಳಲ್ಲಿ ಎಲ್ಲಾ ಐದು ಪ್ರಶ್ನೆಗಳಿಗೆ ಉತ್ತರಿಸಿ. (5×1=5)

1) ಬೇಬಿಯ ಮೊದಲ ಹೆಸರೇನು ?

ಅ) ಹಸೀನಾ ಆ) ಮುಬೀನಾ

ಇ) ಸುಮತಿ ಈ) ಶಾಂತಿ

2) 'ಬಂಡವಾಳಗಾರ ಕೊಂಡು ಮಾರುವ ಭಾಷಾ ಮಾಧ್ಯಮ' ಲೇಖನದ ಕರ್ತೃ ?

ಅ) ಡಾ. ಚಂದ್ರಶೇಖರ್ ಕಂಬಾರ ಆ) ಡಾ.ವಸುಮಳಲಿ

ಇ) ಡಾ.ಎ. ಸತ್ಯನಾರಾಯಣ ಈ) ಡಾ.ಪದ್ಮರಾಜ ದಂಡಾವತಿ

3) ಸಂಕೇತ ರೂಪಗಳಾದ 0 ಮತ್ತು 1 ರ ಸಂಯೋಜನೆಗಳ ಭಾಷೆ

ಅ) ತಂತ್ರ ಭಾಷೆ ಆ) ಯಂತ್ರ ಭಾಷೆ

ಇ) ಇಂಗ್ಲೀಷ್ ಭಾಷೆ ಈ) ಪ್ರಾದೇಶಿಕ ಭಾಷೆ

4) 'ಗಂಡು ಹುಡುಗ್ರು, ಪತ್ರ, ಬರೆದ್ರ ಸೇರೋದಿಲ್ಲ ನನಗೆ' ಎಂದವರು ?

ಅ) ಸುಮತಿ ಆ) ಶಾಂತಿ

ಇ) ಮುಬೀನಾ ಈ) ಫಾತೀಮಾ

5) 'ಎಲ್ಲವಳೆಲ್ಲವಳೆಲ್ಲವಳು' ಲೇಖನದ ಕರ್ತೃ ?

ಅ) ಡಾ.ದ.ರಾ.ಬೇಂದ್ರೆ ಆ) ಪು.ತಿ.ನ.

ಇ) ಡಾ. ಶಿವರಾಮ ಕಾರಂತ ಈ) ಡಾ.ಕುವೆಂಪು